

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಕತ್ತೆಗಳೂ ಮತ್ತು ಕತ್ತೆಸವಾರರೂ!...

"ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ್ದು ಯಾವಾಗ?"

ಹೀಗೆಂದು ಕೇಳಿದವರು ಬೇರೆ ಯಾರೂ ಅಲ್ಲ. ಇತ್ತೀಚೆಗೆ ವಿಧಾನಪರಿಷತ್ತಿನ ಸಭಾಪತಿಗಳಾಗಿ ಆಯ್ಕೆಯಾದ ಸನ್ಮಾನ್ಯ ಡಿ.ಎಚ್. ಶಂಕರಮೂರ್ತಿಯವರು. ಸಂದರ್ಭ: ಕಳೆದ ಶನಿವಾರ ಶಿವಮೊಗ್ಗದ ಸರ್ಕಾರಿ ಪ್ರೌಢಶಾಲೆಯ ಆವರಣದಲ್ಲಿ ಏರ್ಪಡಿಸಿದ್ದ ಅವರ ಸನ್ಮಾನ ಸಮಾರಂಭ. ಇದೇ ಶಾಲೆಯಲ್ಲಿ ಓದಿದವರು ಎಂಬ ಅಭಿಮಾನದಿಂದ ಹಳೆಯ ವಿದ್ಯಾರ್ಥಿಸಂಘದ ಹಿರಿಯ ಸದಸ್ಯರು ಆ ಶಾಲೆಯಲ್ಲಿಯೇ ಓದಿದ ನಮ್ಮ ಸಮ್ಮುಖದಲ್ಲಿ ಅವರಿಗೆ ಆತ್ಮೀಯ ಸನ್ಮಾನ ಏರ್ಪಡಿಸಿದ್ದರು. ಸಭೆಯ ಮಧ್ಯೆ ಅವರ ಸಹಪಾಠಿಗಳಾಗಿದ್ದ ಕಂಚಿನ ಕಂಠದ ಶಿವಮೊಗ್ಗ ಸುಬ್ಬಣ್ಣನವರಿಂದ ಕುವೆಂಪುರವರ "ಆನಂದಮಯ ಈ ಜಗ ಹೃದಯ" ಕವಿತೆಯ ಸುಮಧುರ ಗಾಯನ. ಸನ್ಮಾನಿತರಾಗಿ ಹರ್ಷಗೊಂಡ ಶಂಕರಮೂರ್ತಿಯವರು ಮಾತನಾಡಲು ಮೇಲೇಳುತ್ತಿದ್ದಂತೆಯೇ ವಿದ್ಯುತ್ ಕೈಕೊಟ್ಟಿತು. ಸಾಮಾನ್ಯವಾಗಿ ವಿದ್ಯುತ್‌ಸ್ಪರ್ಶದಿಂದ ಷಾಕ್ ಉಂಟಾಗುತ್ತದೆಯೆಂದು ಇದುವರೆಗೆ ತಿಳಿದಿದ್ದ ನಮಗೆ ವಿದ್ಯುತ್ ಇಲ್ಲದೆಯೂ 'ಷಾಕ್' ಉಂಟಾಗಬಹುದೆಂದು ಅನುಭವಕ್ಕೆ ಬಂದದ್ದು ಆಗಲೇ! ಆದರೂ ಆ 'ವಿದ್ಯುತ್‌ಷಾಕ್'ನಿಂದ ವಿಚಲಿತರಾಗದ ಸಭಾಪತಿಗಳು ಧ್ವನಿವರ್ಧಕವಿಲ್ಲದೆಯೇ ವೇದಿಕೆಯ ಮುಂದೆ ನಿಂತು ಗಟ್ಟಿದನಿಯಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ತಮ್ಮ ಮಾತುಗಳನ್ನು ಆರಂಭಿಸಿದರು. ಅದುವರೆಗೆ ಅನೇಕರು ಮಾಡಿದ ನೀರಸ ಭಾಷಣಗಳನ್ನು ನಿರಾಸಕ್ತಿಯಿಂದ ಕೇಳಿ ಸಪ್ಪೆ ಮೋರೆ ಹಾಕಿಕೊಂಡಿದ್ದ ವಿದ್ಯಾರ್ಥಿಗಳ ಮುಖದಲ್ಲಿ ವಿದ್ಯುತ್ ಇಲ್ಲದೆಯೂ ವಿದ್ಯುತ್‌ಸಂಚಾರವಾದಂತಾಯಿತು. ಸಭಾಪತಿಗಳು ಈ ಪ್ರಶ್ನೆಯನ್ನು ಕೇಳಲು ಒಂದು ಕಾರಣವಿತ್ತು. ಈ ಸರ್ಕಾರೀ ಪ್ರೌಢಶಾಲೆಗೆ ನೂರಾರು ವರ್ಷಗಳ ಇತಿಹಾಸವಿದೆ. 1853 ರಲ್ಲಿ ಬ್ರಿಟಿಷರ ಕಾಲದಲ್ಲಿ ಆರಂಭವಾದ ಶಾಲೆ ಇದು. ಮಹಾತ್ಮಾ ಗಾಂಧೀಜಿಯವರು ಸಿ. ರಾಜಗೋಪಾಲಚಾರಿಯವರೊಡನೆ 1927 ರ ಆಗಸ್ಟ್ ತಿಂಗಳಲ್ಲಿ ಶಿವಮೊಗ್ಗಕ್ಕೆ ಆಗಮಿಸಿದ್ದಾಗ ಈ ಶಾಲೆಯ ಆವರಣದಲ್ಲಿ ಸ್ವಾತಂತ್ರ್ಯ ಹೋರಾಟಗಾರರನ್ನು ಕುರಿತು ಭಾಷಣ ಮಾಡಿದರು. ಆ ಸಂದರ್ಭದ ಅಪರೂಪದ ಫೋಟೋ ಈಗಲೂ ಈ ಶಾಲೆಯಲ್ಲಿದೆ.

ಸಭಾಪತಿಗಳು "ಸ್ವಾತಂತ್ರ್ಯ ಸಿಕ್ಕಿದ್ದು ಯಾವಾಗ?" ಎಂದು ಕೇಳಿದ ಪ್ರಶ್ನೆಗೆ ಸಭೆಯ ಹಿಂದುಗಡೆ ಕುಳಿತ ವಿದ್ಯಾರ್ಥಿಗಳೂ ಒಳಗೊಂಡಂತೆ ಎಲ್ಲ ಮಕ್ಕಳೂ ಏಕಕಂಠದಿಂದ "ಆಗಸ್ಟ್ 15, 1947" ಎಂದು ಏರುದನಿಯಲ್ಲಿ ಕೂಗಿ ಹೇಳಿದರು. ಹಾಗಾದರೆ "ಸ್ವಾತಂತ್ರ್ಯ ಕಳೆದು ಹೋಗಿದ್ದು ಯಾವಾಗ, ಹೇಳಿ ಮಕ್ಕಳೇ?" ಎಂಬ ಅವರ ಮುಂದಿನ ಪ್ರಶ್ನೆಯನ್ನು ಕೇಳಿ ಮಕ್ಕಳು ತಬ್ಬಿಬ್ಬಾದರು. ವೇಗವಾಗಿ ಓಡುತ್ತಿದ್ದವನು ಎಡವಿ ಮುಗ್ಗರಿಸಿ ಬಿದ್ದಂತಾಗಿತ್ತು! ಮಕ್ಕಳೇ ಏಕೆ, ಸಭೆಯಲ್ಲಿ ಕುಳಿತ ಹಿರಿಯರೂ ಸಹ ಏನು ಹೇಳಬೇಕೆಂದು ತೋಚದೆ ಗಂಭೀರ ಮುಖಮುದ್ರೆ ಧರಿಸಿದರು. 'ಬ್ರಿಟಿಷರು ನಮ್ಮನ್ನು ಆಳಲು ಆರಂಭಿಸಿದಾಗ' ಎಂದು ವೇದಿಕೆಯ ಮೇಲಿದ್ದ ಒಬ್ಬಿಬ್ಬ ಹಿರಿಯರು ಮೆಲುದನಿಯಲ್ಲಿ ಉದ್ಗರಿಸಿದ್ದು ಕೇಳಿಸಿತು. ಉತ್ತರ ಏನಿರಬಹುದೆಂದು ಕುತೂಹಲದಿಂದ ಕಾಯುತ್ತಿದ್ದ ಮಕ್ಕಳನ್ನು ನೋಡಿ ಸಭಾಪತಿಗಳು ಸ್ವತಃ ಮುಂದಾಗಿ ನೀಡಿದ ಉತ್ತರ: "ನಿಜ ಹೇಳಬೇಕೆಂದರೆ ನನಗೂ ಗೊತ್ತಿಲ್ಲ!" ನಿರುತ್ತರರಾಗಿ ತಲೆತಗ್ಗಿಸಿದ್ದ ವಿದ್ಯಾರ್ಥಿಗಳು ಮತ್ತೆ ತಲೆ ಎತ್ತಿ ಗೊಳ್ಳೆಂದು ನಗಲಾರಂಭಿಸಿದರು. ಮಕ್ಕಳ ಆ ನಗುವಿನಲ್ಲಿ ಅರಳಿದ ಹೂಗಳ ಮೋಹಕತೆ ಇತ್ತು. ಸಭಾಪತಿಗಳು ಮತ್ತು ಮಕ್ಕಳ ಮಧ್ಯೆ ನಡೆದ ನಂತರದ ಸಂವಾದ ಶಾಲೆಯ ತರಗತಿಯಲ್ಲಿ ಒಬ್ಬ ಉತ್ತಮ ಅಧ್ಯಾಪಕ ಮಾಡುವ ಇತಿಹಾಸದ ಪಾಠದಂತಿತ್ತು! ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಭಾರತದ ವಿವಿಧ ಪ್ರಾಂತ್ಯಗಳನ್ನು ಆಳುತ್ತಿದ್ದ ರಾಜಮಹಾರಾಜರುಗಳಲ್ಲಿದ್ದ ಅಸಂಘಟನೆ, ಪರಸ್ಪರರಲ್ಲಿ ಇದ್ದ ಈರ್ಷ್ಯೆ, ಅಸೂಯೆ, ದ್ವೇಷ, ಕಲಹಗಳು ಹೇಗೆ ಬ್ರಿಟಿಷರಿಗೆ ಇಲ್ಲಿಯವರ ಅರಸೊತ್ತಿಗೆಯನ್ನು ಕಿತ್ತೊಗೆದು ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಲು ಸಾಧ್ಯವಾಯಿತು ಎಂಬುದನ್ನು ವಿವರಿಸಿ ಹೇಳಿದ ರೀತಿ ಮಕ್ಕಳ ಮನಸ್ಸನ್ನು ಸೆರೆಹಿಡಿದಿತ್ತು. ಆದರೆ ವಿಧಾನಸೌಧದಲ್ಲಿ ಸಭಾಪತಿಗಳಾಗಿ 'ಮೇಲ್ಮನೆಯ ಮಕ್ಕಳ'ನ್ನು ಹೊರಹೋಗದಂತೆ

ಹಿಡಿದಿಡಲು ಆಗದೇ ಇದ್ದುದು ದುರದೃಷ್ಟಕರ. ಇದು 'ಹಠಮಾರಿ' ಮಕ್ಕಳ ತಪ್ಪೋ, 'ಹೊಣೆಗೇಡಿ' ತಂದೆತಾಯಿಗಳ ತಪ್ಪೋ, ಇನ್ನೊಬ್ಬರ ಮನೆಯ ಸುದ್ದಿ ನಮಗೇಕೆಂದು ಮೌನ ಧರಿಸಿರುವ ಮುಟ್ಠಾಳ ಜನರ ತಪ್ಪೋ? ಒಟ್ಟಾರೆ ಜನತಂತ್ರ ವ್ಯವಸ್ಥೆಯಲ್ಲಿ ಇವೆಲ್ಲಾ ಅನಿವಾರ್ಯ, 'necessary evils' ಎಂಬಂತಾಗಿದೆ.

ಸಾವಿರಾರು ಮೈಲುಗಳಾಚೆ ಇರುವ ಇಂಗ್ಲೆಂಡಿನಿಂದ ಇಲ್ಲಿಗೆ ಬಂದ ನೂರಿನ್ನೂರು ಬ್ರಿಟಿಷ್ ವ್ಯಾಪಾರಿಗಳಿಗೆ ಈ ದೇಶದ ಕೋಟ್ಯಂತರ ಜನ ಒಂದೊಂದು ಕಲ್ಲು ಹೊಡೆದಿದ್ದರೆ ಬ್ರಿಟಿಷರಿಗೆ ತಮ್ಮ ಸಾಮ್ರಾಜ್ಯವನ್ನು ಇಲ್ಲಿ ವಿಸ್ತರಿಸಲು ಸಾಧ್ಯವಾಗುತ್ತಿರಲಿಲ್ಲ ಎನ್ನುವುದು ಶಂಕರಮೂರ್ತಿಯವರ ವಾದದ ತಿರುಳಾಗಿತ್ತು. ಆದರೆ ಆಗ ಭಾರತ ಸಾಂಸ್ಕೃತಿಕವಾಗಿ ಒಂದು ದೇಶ ಆಗಿತ್ತೇ ಹೊರತು ರಾಜಕೀಯವಾಗಿ ಒಂದು ದೇಶ ಆಗಿರಲಿಲ್ಲವೆಂಬುದು ನಿರ್ವಿವಾದ ಸಂಗತಿ. ರಣರಂಗದಲ್ಲಿ ಬ್ರಿಟಿಷರ ವಿರುದ್ಧ ವೀರಾವೇಷದಿಂದ ಹೋರಾಡಿ ಹಿಮ್ಮೆಟ್ಟಿಸಿದ, ಜೀವದ ಹಂಗು ತೊರೆದು ಹೋರಾಡಿ ಮಡಿದ ವೀರಾಗ್ರಣಿಗಳು ಭಾರತದ ಇತಿಹಾಸದಲ್ಲಿ ಆಗಿಹೋಗಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಅವರೆಲ್ಲರೂ ಹೋರಾಡಿದ್ದು ಅವರವರು ಆಳುತ್ತಿದ್ದ ರಾಜ್ಯದ ಅಸ್ತಿತ್ವಕ್ಕಾಗಿ. ಅವರಿಗೆ ಅವರದೇ ಆದ ದೇಶವಿತ್ತು, ಸ್ವಾಭಿಮಾನವಿತ್ತು. ಅದರ ಉಳಿವಿಗಾಗಿ ಅವರ ಹೋರಾಟ ನಡೆದಿತ್ತು. ಶರೀರದ ತೋಳ್ಬಲದಿಂದ, ಕೈಯಲ್ಲಿ ಶಸ್ತ್ರಾಸ್ತ್ರಗಳನ್ನು ಹಿಡಿದು ಕಾದಾಡಿದ ರಾಜಶಕ್ತಿಗೆ ಸಿಗದ ಸಮಗ್ರ ದೇಶದ ಸ್ವಾತಂತ್ರ್ಯ, ಮಹಾತ್ಮಾ ಗಾಂಧೀಜಿಯವರ ಮುಂದಾಳುತನದಲ್ಲಿ ಸತ್ಯ ಮತ್ತು ಅಹಿಂಸೆಯೆಂಬ ಆಧ್ಯಾತ್ಮಿಕ ಮಾರ್ಗವನ್ನು ಅನುಸರಿಸಿದ ಜನಶಕ್ತಿಗೆ ದೊರೆಯಿತು. "ಸತ್ಯದ ಕೂರಲಗನೆ ತಳೆದುಕೊಂಡು ಸದ್ಭಕ್ತರು ಗೆದ್ದರು ಕಾಣಾ ಕೂಡಲಸಂಗಮದೇವಾ" ಎನ್ನುವ ಬಸವಣ್ಣನವರ ವಚನದ ಸಾಲು ಗಾಂಧೀಜಿಯವರ ಜೀವನಕ್ಕೆ ಅಕ್ಷರಶಃ ಅನ್ವಯಿಸುತ್ತದೆ. ಆಗಿನ ದೇಶಭಕ್ತರು ಮಾಡಿದ ತ್ಯಾಗ, ಬಲಿದಾನ ಅವಿಸ್ಮರಣೀಯ. ಈಗ 'ದೇಶಭಕ್ತ' ಎಂಬ ಮಾತೇ ಉಡಾಫೆಯ ಮಾತಾಗಿ ಪರಿಣಮಿಸಿದೆ. ಬಂಧನದ ಕಹಿ ಅನುಭವವಿಲ್ಲದ ಜನರಿಗೆ ಸ್ವಾತಂತ್ರ್ಯದ ಸಿಹಿ ಅನುಭವ ಉಂಟಾಗುವುದಾದರೂ ಹೇಗೆ ಸಾಧ್ಯ?

ನಮಗೆ ಸಿಕ್ಕಿರುವ ಸ್ವಾತಂತ್ರ್ಯವಾದರೂ ಏನು? ಎಲ್ಲಿಯೋ ಓದಿದ ನೆನಪು. ಇದೇನು ದಂತಕಥೆಯೋ ನಿಜವಾಗಿ ನಡೆದ ಘಟನೆಯೋ ಗೊತ್ತಿಲ್ಲ. ಭಾರತ ಸ್ವತಂತ್ರಗೊಂಡ ಆರಂಭದ ವರ್ಷದಲ್ಲಿ ದೇಶ ಇಬ್ಭಾಗಗೊಂಡು ಮನೆಮಾರು ಕಳೆದುಕೊಂಡು ಹತಾಶನಾಗಿದ್ದ ಯುವಕನೊಬ್ಬ ಸಮಾರಂಭ ಒಂದರಲ್ಲಿ ಆಗಿನ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರೂರವರ ಹತ್ತಿರ ಧಾವಿಸಿ "ಏನಿದು ಸ್ವಾತಂತ್ರ್ಯ ನಮಗೆ ಸಿಕ್ಕಿರುವುದು?" ಎಂದು ಕೂಗಾಡಿದನಂತೆ. ಅದಕ್ಕೆ ನೆಹರೂ "ನಾನು ಈ ದೇಶದ ಪ್ರಧಾನಿಯಾದರೇನು? ನನ್ನನ್ನೂ ಧೈರ್ಯದಿಂದ ಕೇಳುವ ಹಕ್ಕನ್ನು ನಿನಗೆ ತಂದುಕೊಟ್ಟಿರುವುದೇ ಈ ಸ್ವಾತಂತ್ರ್ಯ!" ಎಂದು ಸಮಾಧಾನಚಿತ್ತದಿಂದ ಉತ್ತರಿಸಿದರಂತೆ. ಆದರೆ ಪರಿಪೂರ್ಣವಾದ ಸ್ವಾತಂತ್ರ್ಯ ಈ ದೇಶದ ಸಾಮಾನ್ಯ ಪ್ರಜೆಗೆ ಇನ್ನೂ ಸಿಕ್ಕಿಲ್ಲ. ಮೇಲರಿಮೆ, ಕೀಳರಿಮೆಗಳು ಭಾರತೀಯ ಜನಜೀವನದಲ್ಲಿ ಈಗಲೂ ಹಾಸುಹೊಕ್ಕಾಗಿ ಬೆಳೆದು ಬಂದಿವೆ.

ಬಹಳ ವರ್ಷಗಳ ಹಿಂದೆ ಬೆನಾರಸ್‌ನಲ್ಲಿ ಓದುತ್ತಿದ್ದಾಗ ನಡೆದ ಒಂದು ವಿಷಾದಕರ ಘಟನೆ. ಕಾಶಿಯಲ್ಲಿ ಮೂರು ವಿಶ್ವವಿದ್ಯಾನಿಲಯಗಳಿವೆ. ಒಂದು ನಾವು ಓದಿದ ಬೆನಾರಸ್ ಹಿಂದೂ ಯೂನಿವರ್ಸಿಟಿ (BHU), ಎರಡನೆಯದು ಕಾಶೀ ವಿದ್ಯಾಪೀಠ, ಮೂರನೆಯದು ಸಂಸ್ಕೃತ ವಿಶ್ವವಿದ್ಯಾನಿಲಯ. ಜಗತ್ಪ್ರಸಿದ್ಧವಾದ ಬೆನಾರಸ್ ಹಿಂದೂ ಯೂನಿವರ್ಸಿಟಿಯನ್ನು ಸಂಸ್ಥಾಪಿಸಿದವರು ಗಾಂಧೀಜಿಯ ನಿಕಟವರ್ತಿಗಳಾದ ಪಂಡಿತ್ ಮದನ ಮೋಹನ ಮಾಲವೀಯಜೀಯವರು. ಮೂರನೆಯದಾದ ಸಂಸ್ಕೃತ ವಿಶ್ವವಿದ್ಯಾನಿಲಯಕ್ಕೆ ಎರಡು ಶತಮಾನಗಳಿಗೂ ಹೆಚ್ಚಿನ ಇತಿಹಾಸವಿದೆ. 1791 ರಲ್ಲಿ ಬ್ರಿಟಿಷರ ಆಳ್ವಿಕೆಯಲ್ಲಿ ಈಸ್ಟ್ ಇಂಡಿಯಾ ಕಂಪನಿಯವರು ಸಂಸ್ಕೃತವಾಙ್ಮಯವನ್ನು ಸಂರಕ್ಷಿಸುವ ದೃಷ್ಟಿಯಿಂದಲೂ, ಭಾರತೀಯರ ಬಗ್ಗೆ ತಮಗೆ ಕಾಳಜಿ ಇದೆಯೆಂದು ತೋರಿಸಿಕೊಳ್ಳುವ ಸಲುವಾಗಿಯೂ ಒಂದು ಸರ್ಕಾರೀ ಸಂಸ್ಕೃತ ಕಾಲೇಜನ್ನು ಸ್ಥಾಪಿಸಿದರು. ಇದರಲ್ಲಿ ಪ್ರಾಧ್ಯಾಪಕರಾಗಿದ್ದವರೇ ಹೆಸರಾಂತ ಸಂಸ್ಕೃತವಿದ್ವಾಂಸರಾದ ಡಾ. ಜೆ.ಆರ್. ಬ್ಯಾಲೆಂಟಿನ್, ಟಿ.ಎಚ್. ಗ್ರಿಫಿತ್, ಸರ್ ಗಂಗಾನಾಥ್ ಝಾ, ಮಹಾಮಹೋಪಾಧ್ಯಾಯ ಪಂಡಿತ್ ಗೋಪೀನಾಥ್ ಕವಿರಾಜ್ ಮೊದಲಾದವರು. ಭಾರತವು ಸ್ವತಂತ್ರಗೊಂಡ ಮೇಲೆ 1958 ರಲ್ಲಿ ಈ ಕಾಲೇಜನ್ನು ವಿಶ್ವವಿದ್ಯಾನಿಲಯದ ಮಟ್ಟಕ್ಕೆ ಏರಿಸಲು ಸಾಕಷ್ಟು ಪ್ರಯತ್ನ ಮಾಡಿದವರು ಡಾ. ಸಂಪೂರ್ಣಾನಂದರು. ಸಂಸ್ಕೃತ ಮತ್ತು ಹಿಂದಿಯ ವಿದ್ವಾಂಸರೂ, ಉತ್ತರ ಪ್ರದೇಶದ ಮುಖ್ಯಮಂತ್ರಿಗಳೂ ಆಗಿದ್ದ ಅವರು ನಂತರ ರಾಜಾಸ್ಥಾನದ ಗವರ್ನರ್ ಸಹ ಆಗಿದ್ದರು. ಅವರ ಕಾಲಾನಂತರ ಅವರ ಶ್ರಮವನ್ನು ಗುರುತಿಸಿ 1974ರಲ್ಲಿ ಅವರ ಹೆಸರಿನಲ್ಲಿಯೇ "ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾನಿಲಯ" ಎಂದು ಪುನರ್ನಾಮಕರಣ ಮಾಡಲಾಯಿತು. ಹೊಸದಾಗಿ ನಾಮಾಂಕಿತಗೊಂಡಿದ್ದ ಸಂಸ್ಕೃತ ವಿಶ್ವವಿದ್ಯಾನಿಲಯದ ಕ್ಯಾಂಪಸ್‌ನಲ್ಲಿರುವ 'ಸಂಪೂರ್ಣಾನಂದ'ರ ಪುತ್ಥಳಿಯನ್ನು ಅನಾವರಣಗೊಳಿಸಲು ಅಂದಿನ ಕೇಂದ್ರ ರಕ್ಷಣಾ ಸಚಿವರಾಗಿದ್ದ ಬಾಬು ಜಗಜೀವನ್ ರಾಂ ರವರು ಕಾಶಿಗೆ ಬಂದಿದ್ದರು. ಅವರು ಆ ಪುತ್ಥಳಿಯನ್ನು

ಅನಾವರಣಗೊಳಿಸಿ ಸಭಾಕಾರ್ಯಕ್ರಮವನ್ನು ಮುಗಿಸಿಕೊಂಡು ದೆಹಲಿಗೆ ವಾಪಾಸು ಹೋಗುತ್ತಿದ್ದಂತೆಯೇ ಕಾಶಿಯ ಮಡಿವಂತ ಪಂಡಿತರು ಗಂಗಾ ನದಿಗೆ ಓಡೋಡಿ ಹೋಗಿ 'ಗಂಗಾಜಲ'ವನ್ನು ತಂದು ಪುತ್ಥಳಿಯ ಮೇಲೆ ಪ್ರೋಕ್ಷಣೆ ಮಾಡಿದರು! ಜಗಜೀವನ್ ರಾಂ ರವರು ಜಾತಿಯಿಂದ ಹರಿಜನರಾಗಿದ್ದು ಅವರು ಮುಟ್ಟಿದ್ದರಿಂದ ಪುತ್ಥಳಿಯು ಅಪವಿತ್ರಗೊಂಡಿದೆಯೆಂದು 'ಗಂಗಾಜಲ'ದಿಂದ ಶುದ್ಧೀಕರಿಸುವುದು ಕಾಶಿಯ ಮಡಿವಂತ ಪಂಡಿತರ ಉದ್ದೇಶವಾಗಿತ್ತು. ಬಾಬು ಜಗಜೀವನ್ ರಾಂ ರವರು ದೇಶದ ರಕ್ಷಣಾಸಚಿವರಾಗಿದ್ದರೂ ಯಾವ ಮದ್ದು ಗುಂಡುಗಳೂ ಹಾರಲೇ ಇಲ್ಲ! ತಮ್ಮವರಿಂದಲೇ ಆದ ಮೇಲರಿಮೆಯ ಧಾಳಿಯಿಂದ ತಮ್ಮ ಸ್ವಂತ ರಕ್ಷಣೆಯನ್ನು ಮಾಡಿಕೊಳ್ಳಲು ಆಗಲೇ ಇಲ್ಲ. ತಮಗೆ ಮತ್ತು ತಮ್ಮ ಜನಾಂಗಕ್ಕೆ ಆದ ಅವಮಾನದಿಂದ ಸಿಡಿಮಿಡಿಗೊಂಡು ಶ್ರೀಮತಿ ಇಂದಿರಾ ಗಾಂಧಿಯ ಸಚಿವ ಸಂಪುಟದಿಂದ ಹೊರಬರಲೂ ಇಲ್ಲ!

"ಸ್ವಾತಂತ್ರ್ಯ ಕಳೆದುಹೋಗಿದ್ದು ಯಾವಾಗ?" ಎಂದು ಶಂಕರಮೂರ್ತಿಯವರು ಮಕ್ಕಳನ್ನು ಪ್ರಶ್ನಿಸುವಾಗ ಅವರ ಮನಸ್ಸಿನಲ್ಲಿ ಕಾಡಿಸಿದ್ದು ಬ್ರಿಟಿಷರ ದಾಸ್ಯ, ಗುಲಾಮಗಿರಿ. ಆದರೆ ಈ ಪ್ರಶ್ನೆ ಕಿವಿಗೆ ಬಿದ್ದಾಗ ನಮ್ಮ ಮನಸ್ಸಿನಲ್ಲಿ ಮೂಡಿಬಂದ ವಿಚಾರ ಗತಕಾಲದ ಇತಿಹಾಸವಲ್ಲ, ಸಮಕಾಲೀನ ದುಃಸ್ಥಿತಿ. ಸ್ವತಂತ್ರಭಾರತದಲ್ಲಿ ಬ್ರಿಟಿಷರ ಗುಲಾಮಗಿರಿ ಹೋಗಿ ರಾಜಕಾರಣಿಗಳ ಗುಲಾಮಗಿರಿ ಬಂದಿದೆ. ಸ್ವಾತಂತ್ರ್ಯ ಸಿಕ್ಕಿರುವುದು ಭ್ರಷ್ಟ ರಾಜಕಾರಣಿಗಳಿಗೇ ಹೊರತು ಸಾಮಾನ್ಯ ಪ್ರಜೆಗೆ ಅಲ್ಲ. 'ತೇನ ವಿನಾ ತೃಣಮಪಿ ನ ಚಲತಿ' ಅಂದರೆ 'ದೇವರ ಕೃಪೆಯಿಲ್ಲದೆ ಒಂದು ಹುಲ್ಲುಕಡ್ಡಿಯೂ ಚಲಿಸುವುದಿಲ್ಲ' ಎನ್ನುವಂತೆ ಇಂದು ರಾಜಕಾರಣಿಗಳ 'ಕೃಪೆ' ಇಲ್ಲದೆ ಯಾವ ಕೆಲಸವೂ ಆಗುವುದಿಲ್ಲ. ಇಂದಿನ 'ಪ್ರಜಾಪ್ರಭುತ್ವ' ಪ್ರಜೆಗಳ ಪ್ರಭುತ್ವ ಅಲ್ಲ; ಪ್ರಜೆಗಳ ಮೇಲಿನ ದಬ್ಬಾಳಿಕೆ ಆಗಿದೆ. ಶಾಸಕರು, ಮಂತ್ರಿಗಳು, ಲೋಕಸಭಾಸದಸ್ಯರು ತಮ್ಮ ತಮ್ಮ ಭತ್ಯೆಗಳನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆಯೇ ಹೊರತು ಜನಸಾಮಾನ್ಯರ ಜೀವನಕ್ಕೆ ಆಸರೆ ಒದಗಿಸುವಲ್ಲಿ ಆಸಕ್ತಿ ತೋರಿಸುತ್ತಿಲ್ಲ. ಪಾರ್ಲಿಮೆಂಟಿನಲ್ಲಿ ಅವರ ಹಿತಾಸಕ್ತಿಗಳನ್ನು ಕಾಪಾಡಬಲ್ಲ ಬಿಲ್ಲುಗಳು ಬೇಗನೆ ಪಾಸಾಗುತ್ತಿವೆಯೇ ಹೊರತು ಜನಸಾಮಾನ್ಯರ ಹಿತವನ್ನು ಕಾಪಾಡುವ ಬಿಲ್ಲುಗಳಲ್ಲ. ಇಂದಿನ ರಾಜಕೀಯದಲ್ಲಿ ಏನಾದರೂ ತತ್ವವಿದೆಯೇ? "Politics without principles is a sin" (ತತ್ವರಹಿತ ರಾಜಕೀಯ ಒಂದು ಪಾಪ) ಎನ್ನುತ್ತಾರೆ ಗಾಂಧೀಜಿ. ಜೈಲಿನಲ್ಲಿರಬೇಕಾದ ಬಹುತೇಕ ಜನರು ನಮ್ಮ ಅಸೆಂಬ್ಲಿ ಮತ್ತು ಪಾರ್ಲಿಮೆಂಟುಗಳಲ್ಲಿ ವಿರಾಜಮಾನರಾಗಿದ್ದಾರೆ. ಕೋರ್ಟ ಕೇಸುಗಳಿಗೆ ಹಾಜರಾಗದೆ ವಾರೆಂಟ್ ಹೊರಡಿಸಿದರೂ ಅವರನ್ನು ಹಿಡಿದು ಹಾಜರುಪಡಿಸಬೇಕಾದ ಪೋಲೀಸರ ಬೆಂಗಾವಲಿನಲ್ಲಿಯೇ ಅವರು ಮೆರೆಯುತ್ತಿದ್ದಾರೆ. ಇನ್ನೂ ಕೆಲವು ರಾಜಕಾರಣಿಗಳು ಮಾಡಬಾರದ ಹೀನ ಅಪರಾಧಗಳನ್ನು ಮಾಡಿ ಇನ್ನೇನು ಪೋಲೀಸರು ಬಂಧಿಸುವುದು ಅನಿವಾರ್ಯವೆಂದಾದಾಗ ರಾಜೀನಾಮೆ ಎಸೆದು ಭೂಗತರಾಗುತ್ತಾರೆ. ಇನ್ನು ಕೆಲವರು ತಮ್ಮ ವ್ಯಾಪಾರ ವಹಿವಾಟುಗಳನ್ನು ಬೆಳೆಸಲು, ತಮ್ಮ ವಿರೋಧಿಗಳನ್ನು ದಮನಮಾಡಲು ಹಣವನ್ನು ಚೆಲ್ಲಿ ಆರಿಸಿ ಬಂದು ಹಣಬಲದಿಂದ ಮಂತ್ರಿಗಳಾಗುತ್ತಾರೆ, ಶಾಸಕರನ್ನು ಹೈಜಾಕ್ ಮಾಡುತ್ತಾರೆ, ಮುಖ್ಯಮಂತ್ರಿಗಿಂತಲೂ ಒಂದು ಗೇಣು ಎತ್ತರ ಬೆಳೆಯುತ್ತಾರೆ. ಪ್ರಜಾಪ್ರಭುತ್ವದಲ್ಲಿ ಇದಕ್ಕಿಂತಲೂ ದೊಡ್ಡ ವ್ಯಂಗ್ಯ ಬೇಕೆ! ಕೋಟಿಗಟ್ಟಲೆ ಹಣವನ್ನು ಚುನಾವಣೆಯಲ್ಲಿ ಚೆಲ್ಲಿ ನಂತರ ಖರ್ಚು ಮಾಡಿದ ಹಣದ ಸಾವಿರಪಟ್ಟು ದುಡಿದುಕೊಳ್ಳುವುದು, ದುಡಿದದ್ದನ್ನು ಸಂರಕ್ಷಿಸಿಕೊಳ್ಳಲು ತಮ್ಮ ರಾಜಕೀಯ ಬಲವನ್ನು ಬಳಸಿಕೊಳ್ಳುವುದು ಇವರು ಮಾಡುತ್ತಿರುವ ಬಹುದೊಡ್ಡ 'ದೇಶಸೇವೆ'!

ಬಡಜನರ ಕಷ್ಟ ನಷ್ಟಗಳು ಆಳುವ ಸರ್ಕಾರಕ್ಕೆ ತಟ್ಟುವುದೇ ಇಲ್ಲ. "ಅಪ್ಪ ಸತ್ತರೂ ಸಾಯಲಿ ತಿಥಿ ಊಟ ಸಿಕ್ಕಿದರೆ ಸಾಕು" ಎಂಬ ಮನೋಭಾವನೆ. ಆಡಳಿತದಲ್ಲಿರುವವರಿಗೆ ತಮ್ಮ ಆಡಳಿತ ಅಬಾಧಿತವಾಗಿ ಮುಂದುವರಿಯಬೇಕು; ವಿರೋಧ ಪಕ್ಷದಲ್ಲಿರುವವರಿಗೆ ಆಡಳಿತದಲ್ಲಿರುವವರನ್ನು ಕೆಡವಿ ಖುರ್ಚಿ ಹಿಡಿಯಬೇಕು ಎಂಬ ವಾಂಛೆ! ಬಡಬೋರೇಗೌಡನ ಗೋಳು ಯಾರಿಗೂ ಕೇಳದು. ಪ್ರಜಾಸತ್ತೆಯಲ್ಲಿ ಸತ್ತವನು, ಸಾಯುತ್ತಿರುವವನು, ಸಾಯಬೇಕಾದವನು ಪ್ರಜೆಯೇ ಹೊರತು ಪ್ರಜಾಪ್ರತಿನಿಧಿಯಲ್ಲ! ಬಹಳ ವರ್ಷಗಳ ಹಿಂದೆ ಯಾವುದೋ ಪತ್ರಿಕೆಯಲ್ಲಿ ನೋಡಿದ್ದ ಒಂದು ವ್ಯಂಗ್ಯ ಚಿತ್ರ: ಒಂದು ಕತ್ತೆ, ಅದರ ಮೇಲೆ ಸವಾರಿ ಮಾಡುತ್ತಿರುವ ಒಬ್ಬ ಮನುಷ್ಯ, ಅವನ ಕೈಯಲ್ಲಿ ಒಂದು ಕೋಲು, ಅದರ ತುದಿಯಲ್ಲಿ ಹಗ್ಗಕ್ಕೆ ಕಟ್ಟಿದ ಒಂದು ಹುಲ್ಲಿನ ಹೊರೆ. ಹುಲ್ಲಿನ ಆಸೆಗೆ ಕತ್ತೆ ಓಡುತ್ತಾ ಇದೆ, ಕತ್ತೆಯ ಮೇಲೆ ಕುಳಿತ ಮನುಷ್ಯ ಕತ್ತೆಗೆ ಹುಲ್ಲು ಸಿಗದಂತೆ ಕೈಯಲ್ಲಿ ಹಿಡಿದ ಕೋಲನ್ನು ಮುಂದಕ್ಕೆ ಚಾಚುತ್ತಾ ಕತ್ತೆ ಸವಾರಿ ಮಾಡುತ್ತಿದ್ದಾನೆ. ಆ ಕತ್ತೆ ಬೇರೆ ಯಾರೂ ಇಲ್ಲ, ಈ ದೇಶದ ಸಾಮಾನ್ಯ ಪ್ರಜೆ. ಸಾಮಾನ್ಯ ಜನರನ್ನು ಕತ್ತೆಗಳನ್ನಾಗಿ ಮಾಡಿಕೊಂಡು ಸವಾರಿ ಮಾಡುತ್ತಿರುವವರೇ ಈ ದೇಶದ ಚಾಣಾಕ್ಷ ರಾಜಕಾರಣಿಗಳು!

25.8.2010 ಶ್ರೀ ತರಳಬಾಳು ಜಗದ್ಗುರು

ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑